# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 29.07.2010**

## ***ಪಾದಚಾರಿ ಮಾರ್ಗ ಒತ್ತುವರಿ ತೆರವು***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ದಿನಾಂಕ: 28.07.2010 ರಂದು ಗಿರಿನಗರ ಉಪ ವಿಭಾಗ ವ್ಯಾಪ್ತಿಯ ವಾರ್ಡ್ ನಂ. 162 ಮತ್ತು 164ರ ವ್ಯಾಪ್ತಿಗೆ ಬರುವ ಗಿರಿನಗರ 14ನೇ ಅಡ್ಡರಸ್ತೆಯಿಂದ 164ನೇ ವಾರ್ಡ್‌ನ ದೊಡ್ಡಮಳೆನೀರು ಚರಂಡಿಯವರೆಗೆ (ರಿಂಗ್‌ರಸ್ತೆಯ ಉತ್ತರಭಾಗ) ಇಲ್ಲಿ ಪಾದಚಾರಿ ರಸ್ತೆಯ ಮೇಲೆ ಇರುವ ಒತ್ತುವರಿಯನ್ನು ತೆರವುಗೊಳಿಸುವುದರ ಜೊತೆಯಲ್ಲಿ ಬ್ಯಾನರ್ಸ್ ಹಾಗೂ ಪೋಸ್ಟರ್‌ಗಳನ್ನು ಸಹ ತೆರವುಗೊಳಿಸಲಾಗಿದೆ ಮತ್ತು ಒತ್ತುವರಿ ಭಾಗವನ್ನು ತೆರವಿನ ಸಂದರ್ಭದಲ್ಲಿ ರೂ. 6,500/-ಗಳ ದಂಡವನ್ನು ವಿಧಿಸಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಿರಿನಗರ) ಉಪವಿಭಾಗ ರವರು ತಿಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಮುಖ್ಯ ಅಭಿಯಂತರರು (ದಕ್ಷಿಣ) ಹಾಗೂ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ, ವಾರ್ಡಿನ ಸಹಾಯಕ ಅಭಿಯಂತರರು ಮತ್ತು ಕೆಲಸ ಪರಿವೀಕ್ಷಕರು, ಬಿ.ಬಿ.ಎಂ.ಪಿ ದಕ್ಷಿಣ ವಿಭಾಗದ ಜಾಗೃತ ಪಡೆ ಹಾಗೂ ಚೆನ್ನಮ್ಮನಕೆರೆ ಆರಕ್ಷಕ ಸಿಬ್ಬಂದಿಗಳೊಂದಿಗೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಾಯಿತು.

**ಸಾರ್ವಜನಿಕ ಸಂಪರ್ಕಾಧಿಕಾರಿ**